40(264) ಶ್ರೀ ಶಿವಲಿಂಗೇಗೌಡ.ಕೆ.ಎಂ.(ಅರಸೀಕೆರೆ):ಮಾನ್ಯ ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಸೀಕೆರೆ ನಗರದಲ್ಲಿ ಸಾರ್ವಜನಿಕ ಗ್ರಂಥಾಲಯದ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರಾತಿ ನೀಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಕೆಲಸ ಪ್ರಾರಂಭಿಸದಿರಲು ಕಾರಣವೇನು (ಮಾಹಿತಿ ನೀಡುವುದು)?

ಶ್ರೀ ಕೆ.ಶಿವನಗೌಡ ನಾಯಕ್(ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು):

ಅ) ಹೌದು, ದಿನಾಂಕ: 09.03.2010ರಲ್ಲಿ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಆ) ಸರ್ಕಾರದ ಆದೇಶ ಸಂಖ್ಯೆ ಇಡಿ 258 ಎಲ್‌ಐಬಿ 2009ರಲ್ಲಿ ರೂ.92 ಲಕ್ಷ ಅಂದಾಜು ವೆಚ್ಚದ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಕೆಲಸ ಪ್ರಾರಂಭಿಸಲು ಪ್ರಾಥಮಿಕ ಹಂತಹ ಪ್ರಕ್ರಿಯೆಗಳನ್ನು "ನಿರ್ಮಿತಿ" ಕೇಂದ್ರ ಗಂಡಸಿ ಇವರು ಕೈಗೊಂಡಿರುತ್ತಾರೆ.

ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವುದು

41(258) ಶ್ರೀ ಸಿದ್ದು ಸವದಿ:(ತೇರದಾಳ್) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇರುವ ನಿಯಮಾವಳಿ ಮತ್ತು ತೊಂದರೆಗಳೇನು?

ಆ) ಸದರಿ ಶಾಲೆಗಳನ್ನು ಪ್ರಾರಂಭಿಸುವುದಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು;

ಇ) ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಬಿಇಸದೇ ಇರುವುದರಿಂದ ಬಡ ಮಕ್ಕಳಿಗೆ ಪ್ರವೇಶ ಸಿಗದೇ ಶಾಲೆ, ಕಾಲೇಜುಗಳನ್ನು ಬಿಡುವಂತಹ ಸ್ಥಿತಿ ನಿರ್ಮಾಣವಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರದವರು ತೆಗೆದುಕೊಳ್ಳುವ ಪರಿಹಾರಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಹಾಲಿ ಪ್ರಾರಂಭಿಸಲಾಗಿರುವ ಹೊಸ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿದ ನಂತರ ಹೊಸ ಪ್ರೌಡಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು

ಇ) ಈ ಕಾರಣಗಳಿಂದಾಗಿ ಯಾರೂ ಶಾಲೆ–ಕಾಲೇಜು ಬಿಡುತ್ತಿರುವುದು ಕಂಡುಬಂದಿಲ್ಲ.

ಈ)

ಪ್ರೌಢಶಾಲೆ: ಮಕ್ಕಳ ಹಿತದೃಷ್ಟಿಯಿಂದ 2010–11ನೇ ಸಾಲಿನಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಯೋಜನೆಯಲ್ಲಿ ಆಯ್ದ 80, 8ನೇ ತರಗತಿಗೆ ಉನ್ನತೀಕರಸಲಾದ ಹಿರಿಯ ಪ್ರಾಥಮಿಕ ಶಾಲೆಗಳಿರುವ ಸ್ಥಳಗಳಲ್ಲಿ 9ನೇ ತರಗತಿಯನ್ನು ಆರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

ಪದವಿ ಪೂರ್ವ: ಅಗತ್ಯವಿರುವ ಕಡೆ 160ಕ್ಕೂ ಹೆಚ್ಚು ಖಾಸಗೀ ಪದವಿ ಪೂರ್ವ ಕಾಲೇಜು ಆರಂಭಿಸಲು ಮಂಜೂರಾತಿ ನೀಡಲಾಗಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಈ ಬಾರಿ 437 ವಿಜ್ಞಾನ ಮತ್ತು 270 ವಾಣಿಜ್ಯ ವಿಭಾಗಗಳನ್ನು ಹೆಚ್ಚುವರಿಯಾಗಿ ಪ್ರಾರಂಭಿಸಲು ಆದೇಶಿಸಲಾಗಿದೆ.

ಅನುಬಂಧ

ಸರ್ಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇರುವ ಮಾನದಂಡಗಳು ಮತ್ತು ತೊಂದರೆಗಳು:

ಪ್ರೌಢಶಾಲೆ:

ಮಾನದಂಡಗಳು:

➢ 5 ಕಿ.ಮೀ.ಅಂತರದಲ್ಲಿ ಯಾವುದೇ ಪ್ರೌಢಶಾಲೆ ಇರಬಾರದು.

➢ ಹೊಸ ಶಾಲೆ ಪ್ರಾರಂಭಿಸಲು ಹೊಸ ಕಟ್ಟಡಕ್ಕಾಗಿ ಸ್ಥಳೀಯರು ಕನಿಷ್ಠ 1.00 ಲಕ್ಷರೂಗಳನ್ನು ಠೇವಣಿ ಇಡಬೇಕು ಅಥವಾ ಕನಿಷ್ಠ 5 ಎಕರೆ ಜಮೀನು (ನಗದ ಪ್ರದೇಶದಲ್ಲಿ 2 1/2 ಎಕರೆ) ಒದಗಿಸಬೇಕು.

➢ ಸರ್ಕಾರ ಕಟ್ಟಡ ಒದಗಿಸುವವರೆಗೆ ಸ್ಥಳೀಯರು ತಾತ್ಕಾಲಿಕವಾಗಿ ಬಾಡಿಗೆರಹಿತ ಕಟ್ಟಡ ಒದಗಿಸಬೇಕು.

➢ ಕನಿಷ್ಠ 3 ಹಿರಿಯ ಪ್ರಾಥಮಿಕ ಶಾಲೆಗಳಿಂದ ಕನಿಷ್ಠ 50 ವಿದ್ಯಾರ್ಥಿಗಳು 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರ ಬೇಕು. (ಗುಡ್ಡಗಾಡು ಮತ್ತು ಮಲೆನಾಡು ಪ್ರದೇಶಗಳಲ್ಲಿ ಕನಿಷ್ಠ 25 ವಿದ್ಯಾರ್ಥಿಗಳು)

➢ ಸ್ಥಳೀಯ ಪೀಠೋಪಕರಣ ಮತ್ತು ಪ್ರಯೋಗಾಲಯಗಳಿಗೆ 10,000ರೂಗಳನ್ನು ಕೊಡುಗೆ ನೀಡಬೇಕು.

ಪದವಿ ಪೂರ್ವ ಕಾಲೇಜುಗಳು:

ಮಾನದಂಡಗಳು

➢ ಸರ್ಕಾರಿ ಪದವಿ ಪೂರ್ವ ಕಾಲೇಜುನ್ನು ಮಂಜೂರು ಮಾಡಲು ಉದ್ದೇಶಿಸಿರುವ ಸ್ಥಳದಲ್ಲಿರುವ ಜನಸಂಖ್ಯೆ ಮತ್ತು ಅಗತ್ಯತೆಗೆ ಆದ್ಯತೆ ನೀಡಲಾಗುವುದು.

➢ ಸಮೀಪದಲ್ಲಿರುವ ಪೂರಕ ಪ್ರೌಢಶಾಲೆಗಳು ಮತ್ತು ಕಾಲೇಜು ಪ್ರಾರಂಭವಾದರೆ ಈ ಸುತ್ತಮುತ್ತಲಿನ ಪ್ರೌಢಶಾಲೆಗಳಿಂದ ಕಾಲೇಜಿಗೆ ದಾಖಲಾತಿ ಆಗುವ ಸಂಭವನೀಯ ವಿದ್ಯಾರ್ಥಿಗಳ ಸಂಖ್ಯೆ.

➢ ಲಭ್ಯವಿರುವ ಅಗತ್ಯ ಮೂಲಭೂತ ಸೌಲಭ್ಯಗಳು (ತರಗತಿ ಕೊಠಡಿಗಳು, ಪ್ರಯೋಗಾಲಯ, ಗ್ರಂಥಾಲಯ, ಪ್ರಾಚಾರ್ಯರ ಕೊಠಡಿ, ಕುಡಿಯುವ ನೀರಿನ ಸೌಲಭ್ಯ ಶೌಚಾಲಯ ಇತ್ಯಾದಿ.)

➢ ಸದರಿ ಸ್ಥಳದಲ್ಲಿ ಸರ್ಕಾರಿ ಪ್ರೌಢಶಾಲೆ ಇದ್ದರೆ ಅದನ್ನು ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಾಗಿ ಮೇಲ್ದರ್ಜೆಗೇರಿಸಲು ಅಥವಾ ಸರ್ಕಾರಿ ಪ್ರೌಢಶಾಲೆ ಇಲ್ಲದಿದ್ದಲ್ಲಿ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜುಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು.

➢ ಸಮೀಪದಲ್ಲಿರುವ ಅನುದಾನಿತ ಪದವಿ ಪೂರ್ವ ಕಾಲೇಜುಗಳು ಮತ್ತು ಅಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ.

ತೊಂದರೆಗಳು:-

ಕೋರುವ ಎಲ್ಲಾ ಸ್ಥಳಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದ್ದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಉಂಟಾಗಬಹುದು, ವಿದ್ಯಾರ್ಥಿಗಳು ದೊರಕದೇ ಇರಬಹುದು, ಸರ್ಕಾರಕ್ಕೆ ಸಂಪನ್ಮೂಲದ ಕೊರತೆ ಮತ್ತು ವ್ಯರ್ಥ ಆಗಬಹುದು.

ಹೊಸದಾಗಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವುದು

42(268) ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:(ಸೇಡಂ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2010–11ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಸರ್ಕಾರದ ಹೊಸ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಮಹಾವಿದ್ಯಾನಿಲಯಗಳು ಪ್ರಾರಂಭಿಸಲು ಎಷ್ಟು ಹಣ ಒದಗಿಸಲಾಗಿದೆ;

ಆ) 2010–11ನೇ ಸಾಲಿನಲ್ಲಿ ಹೊಸ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಮಹಾವಿದ್ಯಾನಿಲಯಗಳು ಮಂಜೂರು ಮಾಡಲಾಗುತ್ತಿದೆಯೇ; ಮಂಜೂರು ಮಾಡಿದಲ್ಲಿ, ಯಾವ ಯಾವ ಸ್ಥಳದಲ್ಲಿ ಮಾಡಲಾಗುತ್ತಿದೆ (ವಿವರ ನೀಡುವುದು)?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) 2010–11ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಸರ್ಕಾರದ ಹೊಸ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಯಾವುದೆ ಅನುದಾನ ಒದಗಿಸಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಮದ್ಯಪಾನ ನಿರ್ಬಂಧ